**ದಿನಾಂಕ : *21-02-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : *4* ನೇ ಎದರುದಾರರ ಪರ ಶ್ರೀ. ಎಮ್ ?ಐಸ್ ಹೆಚ್ ವಕೀಲರಿಂದ**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನಾನು ಅಪಘಾತದ ದಿನ ನೀರಬೂಧಿಹಾಳ ದಿಂದ ಕಾರಟಗಿ ಗ್ರಾಮಕ್ಕೆ ಹೊರಟಿದ್ದೇನು. ಆ ದಿನ ಇನೋವಾ ವಾಹನದಲ್ಲಿ ಹೊರಟಿದ್ದೇನು, ವಾಹನದ ನಂಬರ ನೆನಪಿರುವುದಿಲ್ಲ. ಅಪಘಾತವು ಕಮತಗಿ ಕ್ರಾಸ ಹತ್ತಿರ ಆಗಿರುತ್ತದೆ. ಆಗ ಬೆಳಿಗ್ಗೆ 10.30 ಗಂಟೆಯಾಗಿತ್ತು. ಇನೋವಾ ವಾಹನದಲ್ಲಿ 4 ಜನರು ಇದ್ದೇವು. ಇನೋವಾ ವಾಹನವು ನನ್ನ ಗಂಡನ ಸ್ನೇಹಿತನಿಗೆ ಸೇರಿದ್ದಾಗಿತ್ತು. ನಮ್ಮ ಇನೋವಾ ವಾಹನಕ್ಕೆ ಮತ್ತು ಟ್ರಕ್ ಗೆ ಅಪಘಾತವಾಗಿರುತ್ತದೆ. ನಮ್ಮನ್ನು ಕಟ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಟ್ರಕನ ಚಾಲಕನ ತಪ್ಪಿನಿಂದ ಅಪಘಾತವು ಸಂಭವಿಸಿರುತ್ತದೆ. ನನ್ನ ಮುಖಕ್ಕೆ, ಎದೆಗೆ ಮತ್ತು ಕಾಲಿಗೆ ಚಿಕಿತ್ಸೆ ನೀಡಿರುತ್ತಾರೆ. ನನ್ನ ಎದೆಗೆ ಆಪರೇಷನ ಮಾಡಿರುತ್ತಾರೆ. ನಾನು ಹಾಜರು ಪಡಿಸಿರುವ ಬಿಲ್ಲುಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ 12 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಇಂಡಿಯಲ್ಲಿ ವಾಸ ಮಾಡುತ್ತೇನೆ. ನಾನು ಇಂಡಿಯಲ್ಲಿ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಕಳೆದ 5 ವರ್ಷಗಳಿಂದ ಇಂಡಿಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ಇಂಡಿಯಲ್ಲಿ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುವುದಿಲ್ಲ, ನಾನು ಮನೆಯಲ್ಲಿ ಕೆಲಸ ಮಾಡುತ್ತೇನೆ ಎಂದರೆ ಸಾಕ್ಷಿದಾರರು ನನ್ನ ಗಂಡ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ ನಾನು ಮನೆಯಲ್ಲಿ ಪ್ಯಾಕಿಂಗಿಗೆ ಸಹಾಯ ಮಾಡುತ್ತೇನೆ ಎಂದು ಹೇಳುತ್ತಾರೆ. ಕಿರಾಣಿ ಅಂಗಡಿಯು ನನ್ನ ಗಂಡನಿಗೆ ಸೇರಿರುವುದಿಲ್ಲ ಮತ್ತು ಅದು ನಮ್ಮ ಪರಿಚಯ ದವರದು ಇರುತ್ತದೆ. ನಾನು ತಿಂಗಳಿಗೆ 15 ಸಾವಿರ ರೂ. ದುಡಿಯುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ವಯಸ್ಸು 36 ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಟ್ರಕ ಚಾಲಕನ ತಪ್ಪಿನಿಂದ ಅಪಘಾತ ಸಂಭವಿಸಿದ್ದರಿಂದ ಇನೋವಾ ವಾಹನದ ವಿಮಾ ಕಂಪನಿಯವರು ಪರಿಹಾರವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : *3* ನೇ ಎದರುದಾರರ ಪರ ಶ್ರೀಮತಿ ಎ ಸಿ ಜಿ ವಕೀಲರಿಂದ**

ಸದರಿ ಅಪಘಾತವು ಟ್ರಕ ಮತ್ತು ಇನೋವಾ ವಾಹನಗಳ ಮದ್ಯ ಆಗಿರುತ್ತದೆ. ಸದರಿ ವಾಹನಗಳ ನಂಬರ ಹೇಳಲು ಆಗುವುದಿಲ್ಲ. ಇನೋವಾ ವಾಹನದ ತಪ್ಪಿನಿಂದ ಸದರಿ ಅಪಘಾತವು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಟ್ರಕ ವಾಹನದ ಮಾಲಕ ಮತ್ತು ವಿಮಾ ಕಂಪನಿಯವರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರು ಎಂದರೆ ಸರಿ.

**ಪಾಟೀ ಸವಾಲು : *2* ನೇ ಎದರುದಾರರ ಪರ ಶ್ರೀ ಆರ್ ಕೆ ಬಿ ವಕೀಲರಿಂದ**

ನಾನು ಮೊದಲು ಗುಜರಾತ್ ನಲ್ಲಿ ಇರುತ್ತಿದ್ದೆ. ನನ್ನ ಅರ್ಜಿಯಲ್ಲಿ ನಮೂದಿಸಿದ ವಿಳಾಸವು ಶಾಶ್ವತ ವಿಳಾಸ ಆಗಿರುತ್ತದೆ. ನಾನು ಕುಂಬಾರವಾಡದಲ್ಲಿ ವಾಸ ಮಾಡುತ್ತೇನೆ. ನಾನು ಅಪಘಾತ ಆಗುವ ಪೂರ್ವದಲ್ಲಿ ಮನೆಯಲ್ಲಿ ಇರುತ್ತಿದ್ದೆ ಮತ್ತು ಮನೆಗೆಲಸ ಮಾಡುತ್ತಿದ್ದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ನನ್ನ ವೈದ್ಯಕೀಯ ಬಿಲ್ಲುಗಳ ಮೇಲೆ ವೈದ್ಯರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ಬಿಲ್ಲುಗಳನ್ನು ಖೊಟ್ಟಿಯಾಗಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ದಿನಾಂಕ 31-05-2023 ರ ಬಿಲ್ಲನ್ನು ನನ್ನ ಕಿಡ್ನಿ ಸಮಸ್ಯೆಯ ಸಲುವಾಗಿ ಬಾರಡೋಲಿಯಲ್ಲಿ ತೋರಿಸಿದ್ದೆ. ಕಿಡ್ನಿ ಸಮಸ್ಯೆ ಸಲುವಾಗಿ ಅಲ್ಲಿನ ವೈದ್ಯರು ಔಷದ ಚೀಟಿಯನ್ನು ಬರೆದುಕೊಟ್ಟಿದ್ದು ನಾನು ಸದರಿ ಔಷದಕ್ಕೊಸ್ಕರ 320/- ರೂ.ಗಳನ್ನು ಖರ್ಚು ಮಾಡಿರುತ್ತೇನೆ ಮತ್ತು ಸದರಿ ಬಿಲ್ಲನ್ನು ಹಾಜರು ಪಡಿಸಿರುತ್ತೇನೆ ಮತ್ತು ದಿನಾಂಕ 31-05-2023 ರ ಎರಡು ಬಿಲ್ಲುಗಳನ್ನು ಹಾಜರು ಪಡಿಸಿರುತ್ತೇನೆ.

ಕಮತಗಿ ಕ್ರಾಸನಲ್ಲಿ ಕರ್ವಿಂಗ್ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಒಂದು ಸ್ಕೂಟಿ, ಒಂದು ಇನೋವಾ ವಾಹನ ಮತ್ತು ಒಂದು ಲಾರಿ ಭಾಗಿ ಆಗಿರುತ್ತವೆ. ಸದರಿ ಪ್ರಕರಣದಲ್ಲಿ ಸ್ಕೂಟಿ ವಾಹನದ ಮಾಲಕರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸ್ಕೂಟಿ ವಾಹನದ ಚಾಲಕನಿಂದ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸಾಕ್ಷಿದಾರರು ಟ್ರಕ ಚಾಲಕನ ತಪ್ಪಿನಿಂದ ಅಪಘಾತ ಅಗಿರುತ್ತದೆ ಎಂದು ಹೇಳುತ್ತಾರೆ. ಇನೋವಾ ವಾಹನವು *6* ಸೀಟರ ವಾಹನ ಆಗಿರುತ್ತದೆ . ನಾನು ಮತ್ತು ನನ್ನ ವೈನಿ ವಾಹನದಲ್ಲಿ ಹಿಂದೆ ಕುಳಿತಿದ್ದೇವು. ಮುಂದೆ ವಾಹನ ಚಾಲಕ ಮತ್ತು ನನ್ನ ಅಣ್ಣ ಇದ್ದರು. ಇನೋವಾ ವಾಹನದ ಸೀಟ ಸ್ವಲ್ಪ ಎತ್ತರ ಇರುತ್ತವೆ ಎಂದರೆ ಸರಿ. ನಾನು ಹಿಂದೆ ಕುಳಿತಿದ್ದರಿಂದ ಮುಂದೆ ಏನಾಗುತ್ತದೆ ಎಂದು ನಮಗೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವನ್ನು ನಾನು ವೈಯಕ್ತಿಕವಾಗಿ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಪೋಲೀಸ ದಾಖಲೆಯಲ್ಲಿ ಇನೋವಾ ವಾಹನದ ಚಾಲಕನ ಮೇಲೆ ಪೋಲಿಸಲು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿದಾರರು ನಮ್ಮ ವಾಹನ ಚಾಲಕನ ತಪ್ಪು ಇರುವುದಿಲ್ಲ ಎಂದು ಹೇಳುತ್ತಾರೆ. ಪೋಲೀಸರು ವಿಚಾರಣೆ ಮಾಡಿ ದಾಖಲೆಯನ್ನು ಸಲ್ಲಿಸಿದ್ದರೂ ಕೂಡ ನಮ್ಮ ವಾಹನ ಚಾಲಕನ ತಪ್ಪು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. *1* ನೇ ಎದರುದಾರರ ಚಾಲಕನ ಡಿ ಎಲ್ ನ್ನು ಹಾಜರು ಪಡಿಸಿರುತ್ತೇನೆ. *1* ನೇ ಎದುರುದಾರರ ಚಾಲಕನ ಡಿ ಎಲ್ ಇರುವುದಿಲ್ಲ ಮತ್ತು ಅದನ್ನು ಹಾಜರುಪಡಿಸಿರುತ್ತೇನ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ಟ್ರಕನ ಚಾಲಕ ಓಡಿ ಹೋಗಿರುತ್ತಾನೆ. ಅವನು ತನ್ನ ಲೈಸನ್ಸ ಇರದೇ ಇರುವುದರಿಂದ ಓಡಿ ಹೋಗಿರುತ್ತಾನೆ ಎಂದರೆ ಸಾಕ್ಷಿದಾರರು ಅದು ನನಗೆ ಗೊತ್ತಿರುವುದಿಲ್ಲ

ಎಂದು ಹೇಳುತ್ತಾರೆ. ಅಪಘಾತವಾದ ದಿನ ಟ್ರಕ ಚಾಲಕನ ಡಿ ಎಲ್ ಇರದೇ ಇರುವುದರಿಂದ *2* ನೇ ಎದುರುದಾರರು ಪರಿಹಾರವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ಈ ಘಟನೆಯ ಕುರಿತು ಮಾಹಿತಿ ಇರದೇ ಇದ್ದರೂ ಟ್ರಕ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** *1* ನೇ ಎದರುದಾರರು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಯಿತು . ಅವರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.02.22 11:04:03 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.